# ಮೆಸ್ಸಿ ಎಂಬ ವಜ್ರ

ಆತನ ಒಂದೇ ಒಂದು ನಿರ್ಧಾರ–ಕ್ಕೆ ಇಡೀ ಅರ್ಜೆಂಟೀನಾ ದೇಶ ದಿಗ್ಭ್ರಮೆಯಿಂದ ಮೂಕವಿಸ್ಮಿತವಾಗಿದೆ. ‘ಫುಟ್‌ಬಾಲ್ ಸೂಪರ್‌ಸ್ಟಾರ್’ ಲಯೊನೆಲ್ ಮೆಸ್ಸಿಯ ಆ ವಿದಾಯದ ನಿರ್ಧಾರ, ಆ ಘಳಿಗೆಯಲ್ಲಿ ಹೀಗೆ ದೇಶವನ್ನು ಬರಸಿಡಿಲಿನಂತೆ ಅಪ್ಪಳಿಸುತ್ತದೆಂದು ಯಾರೂ ಊಹಿಸಿರಲಿಲ್ಲ. ನಡೆದದ್ದು ಇಷ್ಟೇ– ಚಿಲಿ ಜತೆಗೆ ಕೊಪಾ ಅಮೆರಿಕನ್ ಫೈನಲ್ ಪಂದ್ಯ ನಡೆಯುತ್ತಿತ್ತು. ಮೆಸ್ಸಿ ಕಾಲ ಮುಂದೆ ಚೆಂಡು. ಅದು ಪೆನಾಲ್ಟಿ ಶೂಟೌಟ್. ಹೊಡೆತ ಗೋಲಿನೊಳಕ್ಕೆ ನುಸುಳಿದರೆ ಅರ್ಜೆಂಟೀನಾ ಬಚಾವ್. ಇಲ್ಲವಾದಲ್ಲಿ ಚಿಲಿಗೆ ಕಪ್. ಸಹಸ್ರಾರು ಪ್ರೇಕ್ಷಕರು ಉಸಿರು ಬಿಗಿ ಹಿಡಿದು ನೋಡುತ್ತಿದ್ದರು. ಒಂದೇ ಒದೆತ! ಚೆಂಡು ಗೋಲ್‌ಪೋಸ್ಟ್‌ನ ಮೇಲಿನಿಂದ ಸುಯ್ಯೆಂದು ಹೊರಹಾರಿತು. ಇಡೀ ಕ್ರೀಡಾಂಗಣ ಸ್ತಬ್ಧ! ಮೆಸ್ಸಿ ಟಿ–ಶರ್ಟಿನಿಂದ ಮುಖಮುಚ್ಚಿ ನೆಲಕ್ಕೆ ಕುಸಿದು ಬಗ್ಗಿದ.

ಆ ಒಂದು ಗೋಲ್‌ಗೆ ಇದ್ದ ಮಹತ್ವ ಅಷ್ಟಿಷ್ಟಲ್ಲ. ಏಕೆಂದರೆ ಮೆಸ್ಸಿ ಯ ಆ ಪೆನಾಲ್ಟಿ ಶೂಟೌಟ್ ಹಿಂದೆ ಒಂಬತ್ತು ವರ್ಷಗಳ ಘೋರ ಇತಿಹಾಸವಿತ್ತು. 2007ರಲ್ಲಿ ಮೊದಲ ಬಾರಿ ಹಾಗಾಯಿತು. ಕೊಪಾ ಅಮೆರಿಕಾ ಕಪ್ ಫೈನಲ್‌ನಲ್ಲಿ ಬ್ರೆಝಿಲ್ ಎದುರಾಳಿ. ಹೀಗೆಯೇ ಮೆಸ್ಸಿ ಕಾಲ ಮುಂದೆ ಚೆಂಡಿತ್ತು. ಅದೂ ಪೆನಾಲ್ಟಿ ಶೂಟೌಟ್. ಮೆಸ್ಸಿಯ ಹೊಡೆತ ಗೋಲು ಆಗಲಿಲ್ಲ. ಅರ್ಜೆಂಟೀನಾ ಕಪ್ ಸೋತಿತು.

ಆ ಬಳಿಕದ್ದು 2014ರ ವಿಶ್ವಕಪ್ ಫೈನಲ್ ಪಂದ್ಯ. ಅರ್ಜೆಂಟೀನಾದ ಎದುರಾಳಿ ಜರ್ಮನಿ. ಅಲ್ಲೂ ಹೀಗೆಯೇ ಎಲ್ಲರ ಕಣ್ಣು ಮೆಸ್ಸಿಯ ಕಾಲ ಮೇಲಿತ್ತು. ಪೆನಾಲ್ಟಿ ಶೂಟೌಟ್‌ಗೆ ಮೆಸ್ಸಿ ಸಿದ್ಧನಾದ. ಬಲವಾಗಿ ಒದ್ದ. ಆದರೆ ಚೆಂಡು ಗೋಲಾಗಲಿಲ್ಲ. ಜರ್ಮನಿ ಕಪ್ ಗೆದ್ದಿತು. ಮತ್ತೆ 2015ರಲ್ಲಿ ಕೊಪಾ ಅಮೆರಿಕ ಕಪ್ ಫೈನಲ್. ಅರ್ಜೆಂಟೀನಾದ ಎದುರಾಳಿ ಚಿಲಿ. ಇದೇ ಮೆಸ್ಸಿ ಪೆನಾಲ್ಟಿ ಶೂಟೌಟ್‌ಗೆ ಸಿದ್ಧನಾಗಿ ನಿಂತಿದ್ದ. ಆತ ಚಾಣಾಕ್ಷತೆಯನ್ನೆಲ್ಲ ಬಳಸಿ ಒದ್ದರೂ ಚೆಂಡು ಗೋಲಾಗಲಿಲ್ಲ. ಮತ್ತೆ ಸೋಲು.

ಹೀಗೆ ಮೂರು ಸತತ ಸೋಲುಗಳ ಒತ್ತಡ ಮೆಸ್ಸಿಯ ತಲೆಯ ಮೇಲೆ ಐರಾವತದಂತೆ ಕುಳಿತಿತ್ತು. ಕಳೆದ ವಾರ ಮತ್ತೆ ನಡೆದದ್ದು 2016ರ ಕೊಪಾ ಅಮೆರಿಕನ್ ಕಪ್ ಫುಟ್‌ಬಾಲ್ ಫೈನಲ್. ಮತ್ತೆ ನಿರ್ಧಾರದ ಪೆನಾಲ್ಟಿ ಶೂಟೌಟ್ ಮೆಸ್ಸಿಯ ಕಾಲ ಬುಡದಲ್ಲಿತ್ತು. ಆದರೆ ಗೋಲು ಗಳಿಸುವಲ್ಲಿ ವಿಫಲನಾದ ಮೆಸ್ಸಿ, ‘ಕ್ಷಮಿಸಿ, ನನ್ನಿಂದ ಇನ್ನು ಆಗುವುದಿಲ್ಲ. ಇನ್ನು ಮುಂದೆ ರಾಷ್ಟ್ರೀಯ ತಂಡಕ್ಕೆ ಆಡುವುದಿಲ್ಲ. ಇದೇ ಕೊನೆಯ ಪಂದ್ಯ’ ಎಂದು ವಿದಾಯ ಘೋಷಿಸಿದ. ಅದು ಬಿಟ್ಟು ಮೆಸ್ಸಿಗೆ ಬೇರೆ ದಾರಿ ಇದ್ದಂತೆ ಕಾಣಲಿಲ್ಲ. ಆದರೆ ದೇಶ ಇದನ್ನು ಖಂಡಿತಾ ನಿರೀಕ್ಷಿಸಿರಲಿಲ್ಲ.



ಈಗ ಇಡೀ ದೇಶ ಒಕ್ಕೊರಲಿನಿಂದ ‘ಮೆಸ್ಸಿ ಮರಳಿ ಬಾ’ ಎನ್ನುತ್ತಿದೆ. ಪಿಲೆ, ಮೆರಡೊನಾ, ರೊನಾಲ್ಡೊ ಮುಂತಾದ ವಿಶ್ವವಿಖ್ಯಾತ ಆಟಗಾರರೆಲ್ಲ ವಿದಾಯದ ನಿರ್ಧಾರ ಹಿಂತೆಗೆದುಕೊಳ್ಳಲು ಮೆಸ್ಸಿಯನ್ನು ಒತ್ತಾಯಿಸಿದ್ದಾರೆ. ಸ್ವತಃ ಅರ್ಜೆಂಟೀನಾದ ರಾಷ್ಟ್ರಾಧ್ಯಕ್ಷರೇ ‘ದಯವಿಟ್ಟು ನಿರ್ಧಾರ ಬದಲಿಸಿ’ ಎಂದು ಬಹಿರಂಗ ಮನವಿ ಮಾಡಿದ್ದಾರೆ. ಆದರೆ ಮೆಸ್ಸಿ ನಿರ್ಧಾರ ಸಡಿಲಿಸಿಲ್ಲ.

ಕೆಲವು ಆಟಗಾರರಿರುತ್ತಾರೆ. ಪ್ರತಿಭೆ, ಸಾಮರ್ಥ್ಯ, ಚಾಣಾಕ್ಷತನ ಎಲ್ಲವೂ ಇರುತ್ತದೆ; ಆದರೆ ಅದೃಷ್ಟ ಅವರ ಪರ ಇರುವುದಿಲ್ಲ. ನಮ್ಮ ಮಹೇಂದ್ರಸಿಂಗ್ ದೋನಿ ಅವರನ್ನೇ ನೋಡಿ. ಕ್ರಿಕೆಟ್ ನಾಯಕತ್ವದ ವಿಷಯದಲ್ಲಿ ನಮ್ಮಲ್ಲಿ ಅವರನ್ನೂ ಮೀರಿಸಿದ ಹಲವರಿದ್ದಾರೆ. ಆದರೆ ‘ಸಕ್ಸೆಸ್ ರೇಟ್’ ವಿಷಯಕ್ಕೆ ಬಂದರೆ ದೋನಿ ಅತ್ಯುತ್ತಮ. ಅದಕ್ಕೆ ಕಾರಣ ಅವರ ಸಾಮರ್ಥ್ಯದ ಜತೆಗೆ ಅವರ ತಂಡದಲ್ಲಿ ಇದ್ದಂತಹ ಐವರು ಅದ್ಭುತ ಆಟಗಾರರು. ಆದರೆ ಮೆಸ್ಸಿ ಅಂತಹ ಅದೃಷ್ಟವಂತನಲ್ಲ. ಇತ್ತೀಚಿನ ನಿರ್ಣಾಯಕ ಪಂದ್ಯಗಳಲ್ಲೆಲ್ಲ ಅದೃಷ್ಟ ಆತನಿಗೆ ಕೈಕೊಟ್ಟದ್ದೇ ಹೆಚ್ಚು.

ಹಾಗೆಂದು ಮೆಸ್ಸಿಯ ಪ್ರತಿಭೆಯನ್ನು ಯಾರೂ ತಪ್ಪು ಅಂದಾಜು ಮಾಡಲಾಗದು. ಎಲ್ಲಿಯವರೆಗೆ ಅಂದರೆ, ಇವತ್ತು ಜಗತ್ತಿನ ಅತ್ಯುತ್ತಮ ಫುಟ್‌ಬಾಲ್ ಪಟು ಎಂದು ಕರೆಸಿಕೊಳ್ಳುತ್ತಿರುವ ರೊನಾಲ್ಡೊ ಜತೆಗೆ ತೂಗಿದರೂ ಮೆಸ್ಸಿಯ ಸಾಮರ್ಥ್ಯ ಒಂದು ಗುಲಗಂಜಿ ಹೆಚ್ಚೇ. ಅಂಕಿ ಅಂಶಗಳನ್ನೇ ನೋಡಿ: ರೊನಾಲ್ಡೊ 2003ರಿಂದ ಆಟವಾಡಿದ 130 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 60 ಗೋಲುಗಳನ್ನು ಬಾರಿಸಿದ್ದಾರೆ. ಅದೇ ಮೆಸ್ಸಿ 2005ರಿಂದ ಆಟವಾಡಿ ಕೇವಲ 113 ಪಂದ್ಯಗಳಲ್ಲಿ 55 ಗೋಲು ಬಾರಿಸಿದ್ದಾರೆ. ಆಟದ ವೇಗ, ಜತೆಗಾರರಿಗೆ ಪಾಸ್ ಕೊಡುವ ಉದಾರತೆ, ಏಕಾಂಗಿಯಾಗಿ ಎದುರಾಳಿ ಕೋಟೆಯನ್ನು ಬೇಧಿಸುವ ಚಾಣಾಕ್ಷತೆ ಎಲ್ಲ ವಿಷಯಗಳಲ್ಲೂ ಮೆಸ್ಸಿ ರೊನಾಲ್ಡೊಗಿಂತ ಒಂದು ತೂಕ ಹೆಚ್ಚೇ. ಮೆಸ್ಸಿಗೆ ಹೋಲಿಸಿದರೆ ಮೆರಡೊನ ಕೂಡಾ ಅದೃಷ್ಟವಂತ. ಆತನ ನಾಯಕತ್ವದಲ್ಲಿ ಅರ್ಜೆಂಟೀನಾ ವಿಶ್ವಕಪ್ ಗೆದ್ದಿತ್ತು.

ಮೂರು ಮಕ್ಕಳ ತಂದೆ ಮೆಸ್ಸಿಗೆ ಇನ್ನೂ 29ರ ಹರೆಯ. ಬಾರ್ಸೆಲೊನಾ ಕ್ಲಬ್‌ನ ಜೀವಾಳವಾಗಿದ್ದು, ವರ್ಷಕ್ಕೆ 36 ದಶಲಕ್ಷ ಯೂರೊ ಸಂಬಳ ಪಡೆಯುವ ಮೆಸ್ಸಿ, ಇನ್ನು ಮುಂದೆ ಕ್ಲಬ್ ಪಂದ್ಯಗಳಿಗೇ ಸೀಮಿತ. ಅಷ್ಟಾಗಿಯೂ ಮೆಸ್ಸಿ ನಿರ್ಧಾರ ಬದಲಿಸಬಹುದು ಎಂಬ ನಿರೀಕ್ಷೆ ಇನ್ನೂ ಇದೆ. 2018ರ ವಿಶ್ವಕಪ್ ನಲ್ಲಿ ಮೆಸ್ಸಿ ಅರ್ಜೆಂಟೀನಾ ಪರವಾಗಿ ಮತ್ತೆ ಆಡುವುದು ಖಚಿತ ಎಂಬ ಆಶಾಭಾವ ಅಭಿಮಾನಿಗಳದ್ದು.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65